ನಾನೇನಾದರೂ ಆ ಭಾಗಕ್ಕೆ ಹೋಗಬೇಕಾದರೆ, ನನಗೆ ಅದು ಕಾಣದಂತೆ, ಅರಮನೆಯನ್ನು ಬಳಸಿ ಹೋಗುತ್ತೇನೆ. ನನ್ನ ಮಟ್ಟಿಗೆ ಆ ಅರಮನೆ ಅಸ್ತಿತ್ವದಲ್ಲಿಲ್ಲ.'

ಬಟ್ಟೆ ಅಂಗಡಿಯಿಟ್ಟುಕೊಂಡಿರುವ ಕ್ರಿಸ್ಟಿ ಹೇಳುತ್ತಾರೆ, 'ಅದು ಸುಂದರವಾಗಿದೆ, ಅಗಾಧವಾಗಿದೆ. ಇಡೀ ವಿಶ್ವದಲ್ಲಿ ಇಂಥ ಕಟ್ಟಡ ಬೇರೊಂದಿಲ್ಲ. ಚೌಸೆಸ್ಕೋ ಬಗ್ಗೆ ನೀವೇನೇ ಹೇಳಿ. ಪ್ರಪಂಚಕ್ಕೆ ನಮ್ಮ ದೇಶದ ಹಿರಿಮೆಯನ್ನು ಸಾರಿ ಹೇಳಲು ಇಂಥದೊಂದು ಬೇಕಿತ್ತು.'

(ಕ್ರಿಸ್ಟಿ ಅವರೊಂದಿಗಿನ ಮಾತು ನಮ್ಮ ಬುದ್ಧಿಗೆ ಗ್ರಾಸವಾಗಬಲ್ಲುದು. ಎಂಬತ್ತರ ದಶಕದಲ್ಲಿ ಜೀವನದಲ್ಲಿ ಎದುರಿಸಬೇಕಾದ ಕಷ್ಟಗಳಾವುವು ಎಂದು ಕೇಳಿದ್ದಕ್ಕೆ).

'ಏನು ತೊಂದರೆ ಇರಲಿಲ್ಲ...'

'ಆದರೆ, ಎಲ್ಲರಿಗೂ ಬೆಚ್ಚಗಿನ ಮನೆಗಳಿರಲಿಲ್ಲವಂತೆ. ಆಹಾರಕ್ಕಾಗಿ ಕ್ಯೂ ನಿಲ್ಲಬೇಕಾಗಿತ್ತಂತೆ?'

'ಹಾಂ. ಕೆಲವರ ಮನೆಗಳಲ್ಲಿ ಆ ವ್ಯವಸ್ಥೆ ಇದ್ದಿರಲಿಕ್ಕಿಲ್ಲ. ಆದರೆ ಅವು ಕೆಲವೇ ಕೆಲವು. ಎಲ್ಲರಿಗೂ ಬೇಕಾದಷ್ಟು ಆಹಾರ ಇತ್ತು.'

'ಮನೆಯ ಉಷ್ಣತೆ ಹದಿನಾರು ಸೆಲ್ಶಿಯಸ್‌ಗಳಿಗಿಂತ ಹೆಚ್ಚು ಇಡಬಾರದಾಗಿತ್ತಂತೆ. ಅಂಗಡಿಗಳಲ್ಲೂ, ಸಕ್ಕರೆ, ಹಿಟ್ಟು, ಬೆಣ್ಣೆ, ಮಾಂಸ ಸಿಗುತ್ತಿರಲಿಲ್ಲವಂತೆ. ಆಲೂಗಡ್ಡೆ ಸಹ?'

'ನಿಮಗೆ ಇದೆಲ್ಲ ಹೇಗೆ ಗೊತ್ತಾಯಿತು?'

'ಪುಸ್ತಕಗಳಲ್ಲಿ ಓದಿದ್ದೇನೆ. ತುಂಬ ಮಂದಿ ರೊಮೇನಿಯನ್ನರೇ ಹೇಳಿದರು.'

'ಅದು ಸತ್ಯ ಅಲ್ಲ. ಅವರು ಸುಳ್ಳು ಹೇಳಿದ್ದಾರೆ.'

(ಅವರು ಸುಳ್ಳು ಹೇಳುತ್ತಿದ್ದಾರೆ ಎನ್ನುವುದನ್ನು ನಾನು ಬಹಳ ಸಾರಿ ಕೇಳಿದೆ. ನನ್ನ ಹೆಸರು ಹಾಕಬೇಡಿ ಎನ್ನುವುದನ್ನೂ).

ಚಿನ್ನದಂಥ ಸಮಯವೆಂದೇ ಗುರುತಿಸಲ್ಪಡುವ ಎಂಬತ್ತರ ದಶಕದಲ್ಲಿ, ಇತ್ತ ಪ್ರಜೆಗಳ ಅರಮನೆ ನೆಲದಿಂದ ಮೇಲೇಳುತ್ತಿದ್ದಂತೆ, ಸಾಮಾನ್ಯ ರೊಮೇನಿಯನ್ನರು ಬದುಕಿ ಉಳಿಯುವುದರ ಬಗ್ಗೆ ಚಿಂತಿಸುತ್ತಿದ್ದರು. ಅರಮನೆಯ ಹತ್ತಿರ ಇಪ್ಪತ್ತು ಸಾವಿರ ಜನ ಮೂರು ಪಾಳಿಗಳಲ್ಲಿ, ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲೂ ಕೆಲಸ ಮಾಡುತ್ತಿದ್ದರು. ಯಾರಾದರೂ ಸತ್ತರೆ ಅವರನ್ನು ಅಲ್ಲೇ ಹೂಳಲಾಗುತ್ತಿತ್ತು. ಬುಖಾರೆಸ್ಟ್‌ನಲ್ಲಿ ಕಳೆದುಹೋಗುವುದು ತುಂಬ ಸುಲಭ. ಫೈಲ್‌ಗಳಲ್ಲಿ ಜನರಿಲ್ಲವಾದರೆ ಸರಿ. ಅವರು ಇಲ್ಲವಾದಂತೆಯೇ. ಯಾರನ್ನು ಬೇಕಾದರೂ, ದೇಶಭ್ರಷ್ಟರು, ಬೇಹುಗಾರರು ಮತ್ತು ಸುಮ್ಮನೆ ಇರುವವರನ್ನು ಕಣ್ಮರೆಯಾಗಿಸಬಹುದು. ಅವರನ್ನು ನಿರ್ಮಾಣ ಹಂತದಲ್ಲಿರುವ ಅರಮನೆಗೆ ಹೋಗುವ ದಾರಿ ಹಿಡಿಯುವ ಹಾಗೆ ಮಾಡಿದರಾಯಿತು.

ಅಲ್ಲಿ ಕೆಲಸ ಮಾಡಿದವರು ಇಂದಿಗೂ ನೆನಪಿಸಿಕೊಳ್ಳುವುದೆಂದರೆ, ಅಲ್ಲಿಂದ ಕಳ್ಳತನ ಮಾಡುವುದು ಎಷ್ಟು ಸುಲಭವಾಗಿತ್ತು ಎಂದು. ಅಲ್ಲಿ ಕೆಲಸ ಮಾಡುತ್ತಿದ್ದವರು, ತಮಗೆ ಏನು ಸಿಕ್ಕಿತೋ ಅದನ್ನು ಕೊಂಡೊಯ್ಯುತ್ತಿದ್ದರು. ಟನ್ ಗಟ್ಟಲೆ ಸಿಮೆಂಟ್, ಬೆಲೆಬಾಳುವ ಕಲ್ಲುಗಳು ಇಂಥವೆಲ್ಲ. ಆಗ ರೊಮೇನಿಯಾದ ಮೂಲೆಮೂಲೆಗಳಿಂದ ಇನ್ನಷ್ಟು ಮತ್ತಷ್ಟು ಪದಾರ್ಥಗಳನ್ನು ತರುತ್ತಿದ್ದಂತೆ, ಕಾಣೆಯಾಗುವುದೂ ಅಷ್ಟೇ ವೇಗವಾಗಿ ನಡೆಯುತ್ತಿತ್ತು. ಅಷ್ಟು ದೊಡ್ಡದಾದ ಪ್ರದೇಶವನ್ನು ಇಂಚಿಂಚೂ ಕಾಯಲಾದೀತೆ? ಹೀಗೆಲ್ಲಾ ನಡೆಯುತ್ತಿದೆಯೆಂದು ಚೌಸೆಸ್ಕೋ ದಂಪತಿಗೆ ಗೊತ್ತಿತ್ತೋ ಏನೋ, ಅವರು ವಾರಕ್ಕೆ ನಾಲ್ಕು ಸಲವಾದರೂ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡುತ್ತಿದ್ದರು ಸಲಹೆ ಕೊಡಲು, ನಿಗಾ ಇಡಲು, ತಮ್ಮ ಅಭಿಪ್ರಾಯ ತಿಳಿಸಲು ಮತ್ತು ಮಾಡಿದ್ದನ್ನು ಸರಿಯಿಲ್ಲ ಎಂದು ಹೇಳಿ ಪುನರ್ ನಿರ್ಮಿಸಲು. ಕಾಯುವುದು ಅವರಿಗಾಗದ ಕೆಲಸ.